www.varthabharati.in
ಜನದನಿಯ ಸಾರಥಿ
epaper.varthabharati.in
ವಾರ್ತಾ ಭಾರತಿ
ಸತ್ಯ ಎಲ್ಲರ ದನಿ
◆ ಮಂಗಳೂರು ◆ ಬೆಂಗಳೂರು ◆ ಶಿವಮೊಗ್ಗ
21 ನವೆಂಬರ್ 2017
ಮಂಗಳವಾರ
VARTHABHARATHI KANNADA DAILY
/Varthabharati REGD NO: MNG/958/2016-18 RNI NO. KAR KAN/2003/11378 ● ಸಂಪುಟ 15 ● ಸಂಚಿಕೆ 82 ● ಮಂಗಳೂರು ● ಪುಟ 12

Sahyadri College of Engineering & Management, Adyar, Mangaluru
CENTRAL LIBRARY
FOR COMPUTER EYE TESTING QUALITY SPECTA 0824-24 0824-24 RUSSEL Gousiya Complex, Opp Ashirvad Building, Near

# 23ರಂದು ಸಹ್ಯಾದ್ರಿಯಲ್ಲಿ ಕಾರ್ಪೊರೇಟ್ ಕ್ರಿಕೆಟ್ ಲೀಗ್ ಆರಂಭ

ಮಂಗಳೂರು, ನ.20: ನಗರದ ಬ್ರ್ಯಾಂಡ್ ವಿಷನ್ ಸಂಸ್ಥೆ ವತಿಯಿಂದ ಕರಾವಳಿ ಕರ್ನಾಟಕ ಪ್ರಥಮ ಎ.ಕೆ. ಕಾರ್ಪೊರೇಟ್ ಲೀಗ್ ಕ್ರಿಕೆಟ್ ಪಂದ್ಯಾಟ ನ.23ರಿಂದ 26ರವರೆಗೆ ನಗರದ ಅಡ್ಯಾರಿನ ಸಹ್ಯಾದ್ರಿ ಕಾಲೇಜಿನ ಮೈದಾನದಲ್ಲಿ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಬ್ರ್ಯಾಂಡ್ ವಿಷನ್ ಸಂಸ್ಥೆಯ ಕಾರ್ಯನಿರ್ವಾಹಕ ಇಮ್ತಿಯಾಝ್ ಮುಹಮ್ಮದ್, ಎ.ಕೆ. ಸಮೂಹ ಸಂಸ್ಥೆ ಪಂದ್ಯಕೂಟದ ಟೈಟಲ್ ಸ್ಪೋನ್ಸರ್ ಆಗಿರುತ್ತದೆ ಎಂದರು.

ಪಂದ್ಯಾಟವು ಪ್ರಥಮ ಎರಡು ದಿನಗಳಲ್ಲಿ ಹಗಲು ಹಾಗೂ ಕೊನೆಯ ಎರಡು ದಿನಗಳಲ್ಲಿ ಹೊನಲು ಬೆಳಕಿನಲ್ಲಿ ನಡೆಯಲಿದೆ. ವಿಜೇತ ಮತ್ತು ದ್ವಿತೀಯ ಸ್ಥಾನ ಪಡೆಯುವ ತಂಡಗಳಿಗೆ ಆಕರ್ಷಕ ಟ್ರೋಫಿಯೊಂದಿಗೆ ಲಕ್ಷಾಂತರ ರೂ. ಮೌಲ್ಯದ ನಗದು ಬಹುಮಾನ ಹಾಗೂ ವೈಯಕ್ತಿಕ ಬಹುಮಾನಗಳನ್ನು ನೀಡಲಾಗುವುದು ಎಂದು ಅವರು ಹೇಳಿದರು.

ಪಂದ್ಯಾಟ ಲೀಗ್ ಮತ್ತು ನಾಕೌಟ್ ಆಧಾರದಲ್ಲಿ ತಲಾ 10 ಓವರ್‌ಗಳ ಇನ್ನಿಂಗ್ಸ್ ಒಳಗೊಂಡಿರುತ್ತದೆ. ಉಡುಪಿ ಮತ್ತು ದ.ಕ. ಜಿಲ್ಲೆಯ ವಿವಿಧ ಕಂಪೆನಿ, ಬ್ಯಾಂಕ್ ಮತ್ತು ವಿಶ್ವವಿದ್ಯಾನಿಲಯಗಳ 24 ತಂಡಗಳು ಭಾಗವಹಿಸಲಿವೆ. ತಂಡಗಳನ್ನು 8 ವಿಭಾಗಗಳನ್ನಾಗಿ ವಿಭಜಿಸಲಾಗಿದ್ದು, ಲೀಗ್ ಹಂತದ ಪಂದ್ಯಗಳ ಬಳಿಕ ಪ್ರತಿಯೊಂದು ಗುಂಪಿನಿಂದ ಪ್ರಥಮ ಸ್ಥಾನವನ್ನು ಪಡೆಯುವ ಒಂದೊಂದು ತಂಡವು ನಾಕೌಟ್ ಹಂತ ಪ್ರವೇಶಿಸಲಿವೆ. ವಿಜೇತ ತಂಡಗಳಿಗೆ ರಾಜ್ಯ, ರಾಷ್ಟ್ರಮಟ್ಟದ ಕಾರ್ಪೊರೇಟ್ ಪಂದ್ಯಕೂಟದಲ್ಲಿ ಭಾಗವಹಿಸುವ ಅವಕಾಶ ಲಭ್ಯವಾಗಲಿದೆ. ಹಾರ್ಡ್ ಟೆನ್ನಿಸ್‌ಬಾಲ್ ಉಪಯೋಗದೊಂದಿಗೆ ಟರ್ಫ್ ಪಿಚ್‌ನಲ್ಲಿ ಜರುಗಲಿದೆ. ಪ್ರಥಮ ಪಂದ್ಯವು ನ.23ರಂದು ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದ್ದು, ಬೆಳಗ್ಗೆ 9:30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಈ ಸಂದರ್ಭ ಟ್ರೋಫಿ ಬಿಡುಗಡೆ ಮಾಡಲಾಗುವುದು ಎಂದು ಅವರು ಹೇಳಿದರು.

ಗೋಷ್ಠಿಯಲ್ಲಿ ಮುಹಮ್ಮದ್ ಸಿರಾಜುದ್ದೀನ್, ಫೈಝುಲ್, ನಾಗರಾಜ್, ಬಾಲಕೃಷ್ಣ ಪರ್ಕಳ ಉಪಸ್ಥಿತರಿದ್ದರು.

ಭಾನುವಾರ, 19 ನವೆಂಬರ್ 2017 | ಪುಟಗಳು: 18+6+4(Udp6) | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 113
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ

# VK ವಿಜಯ ಕರ್ನಾಟಕ



17 ವರ್ಷದ ಬಳಿಕ ಭಾರತಕ್ಕೆ ಮಿಸ್ ವರ್ಲ್ಡ್
ಹರಿಯಾಣದ ಮಾನುಷಿ ಛಿಲ್ಲರ್‌ಗೆ ಒಲಿದ ಸೌಂದರ್ಯ ಕಿರೀಟ P12

ಬಂಡಿಪೋರಾದಲ್ಲಿ ಭಾರಿ ಎನ್‌ಕೌಂಟರ್: ಮುಂಬಯಿ ದಾಳಿ ಮಾಸ್ಟರ್ ಮೈಂಡ್ ಲಖ್ವಿ ಸೋದರ ಸಂಬಂಧಿ ಸಹಿತ 6 ಲಷ್ಕರ್ ಉಗ್ರರು ಫಿನಿಶ್ P12

ಮಗಳ ಸಮ್ಮುಖದಲ್ಲೇ ಗೆಳೆಯನ ಜತೆ ಟೆನಿಸ್ ತಾರೆ ಸೆರೆನಾ ವಿಲಿಯಮ್ಸ್ ಮದುವೆ P

# 14 ಡೀಮ್ಡ್ ವಿವಿಗಳಿಗೆ ಸುಪ್ರೀಂ ಚಾಟಿ !

## ಇನ್ನು ವಿಶ್ವವಿದ್ಯಾಲಯ ಹೆಸರು ನೇರವಾಗಿ ಬಳಸುವಂತಿಲ್ಲ | ದೇಶದ 123 ಡೀಮ್ಡ್ ವಿವಿಗಳಿಗೂ ಸೂಚನೆ ಕಳುಹಿಸಿದ ಯುಜಿಸಿ

**ಸ್ಟೀವನ್ ರೇಗೊ, ಮಂಗಳೂರು**

ಇನ್ನು ಮುಂದೆ ಡೀಮ್ಡ್ ವಿವಿಗಳು ತಮ್ಮ ಹೆಸರಿನ ಜತೆ ವಿಶ್ವವಿದ್ಯಾಲಯ ಎಂದು ನೇರವಾಗಿ ಪ್ರಕಟಿಸುವಂತಿಲ್ಲ. ದೇಶದ 123 ಡೀಮ್ಡ್ ವಿವಿಗಳು ತಮ್ಮ ಹೆಸರಿನ ಜತೆ ಬಳಸಿಕೊಳ್ಳುತ್ತಿದ್ದ ಡೀಮ್ಡ್ ವಿಶ್ವವಿದ್ಯಾಲಯ ಪದಕ್ಕೆ ಜಾಸ್ತಿ ಮಹತ್ವ ನೀಡಬೇಡಿ ಎನ್ನುವ ಸಂದೇಶವನ್ನು ಸುಪ್ರೀಂ ಯುಜಿಸಿಗೆ ರವಾನೆ ಮಾಡಿದೆ. ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ಇಂತಹ 14 ಡೀಮ್ಡ್ ವಿವಿಗಳಿಗೆ ಸುತ್ತೋಲೆ ಕಳುಹಿಸಿ ಎಚ್ಚರಿಕೆ ನೀಡಿದೆ.

ಸಂಬಂಧಪಟ್ಟ ಹೆಸರು ಬಳಸಿ ನಂತರ ಆವರಣದೊಳಗೆ ಪುಟ್ಟದಾಗಿ ಡೀಮ್ಡ್ ವಿವಿ ಎಂದು ಬಳಸಿಕೊಳ್ಳಿ ಈ ವಿಚಾರಕ್ಕೆ ತಪ್ಪಿದರೆ ಸೂಕ್ತ ಕ್ರಮ ಕೈಗೊಳ್ಳಿ ಎಂದು ದೇಶದ ಸುಪ್ರೀಂ ಕೋರ್ಟ್ ಯುಜಿಸಿ(ವಿವಿ ಅನುದಾನ ಸಮಿತಿ)ಗೆ ನೇರವಾಗಿ ಸೂಚನೆ ನೀಡುವ ಮೂಲಕ ಡೀಮ್ಡ್ ವಿವಿಗಳಿಗೆ ಚಾಟಿಯೇಟು ನೀಡಿದೆ.

**ದ.ಕ. ಉಡುಪಿಯಲ್ಲೂ ಇವೆ:** ಇದರ ಜತೆಯಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲೂ ಇಂತಹ ನಾಲ್ಕೈದು ಡೀಮ್ಡ್ ವಿವಿಗಳು ಕಾರ್ಯ ನಿರ್ವಹಣೆ ಮಾಡುತ್ತಿದೆ. ಇವೆಲ್ಲವೂ ಮುಂದಿನ ದಿನಗಳಲ್ಲಿ ತಮ್ಮ ಹೆಸರಿನ ಬಳಿಕ ಆವರಣದೊಳಗೆ ಪುಟ್ಟದಾಗಿ ಹೆಸರು ಹಾಕಿ ಅದನ್ನು ಜಾಸ್ತಿಯಾಗಿ ಹೈಲೈಟ್ ಮಾಡಲು ಹೋಗಬೇಡಿ. ವಿವಿ ಹೆಸರು ಬಳಸಿ ವಿದ್ಯಾರ್ಥಿಗಳನ್ನು ಆಕರ್ಷಣೆ ಮಾಡಲು ಹೋಗುವುದು ಬೇಡ ಎನ್ನುವ ಸೂಚನೆಯನ್ನು ಸುಪ್ರೀಂ ತನ್ನ ತೀರ್ಪಿನ ಮೂಲಕ ಯುಜಿಸಿಗೆ ಖಡಕ್ ಸೂಚನೆ ರವಾನೆ ಮಾಡಿದೆ. 1956ರ ಯುಜಿಸಿ ಅಧಿನಿಯಮ 23ರ ಪ್ರಕಾರ ಯಾವುದೇ ಕಾರ್ಪೊರೇಟ್ ಅಥವಾ ಇತರ ಸಂಸ್ಥೆಗಳು ವಿಶ್ವವಿದ್ಯಾಲಯ ಹೆಸರನ್ನು ಬಳಸಿಕೊಳ್ಳುವಂತಿಲ್ಲ. ಕೇವಲ ಸರಕಾರಿ ವಿವಿಗಳು ಮಾತ್ರ ಈ ಹೆಸರು ಬಳಸಿಕೊಳ್ಳಲು ಅರ್ಹತೆ ಪಡೆದುಕೊಂಡಿದೆ ಎಂದು ಸುಪ್ರೀಂ ತನ್ನ ವಾದವನ್ನು ಎತ್ತಿ ಹಿಡಿದಿದೆ.



University Grants Commission

P. K. Thakur

By Speed Post

10th November, 2017

No. F. 5-1/2017 (CPP-I/DU)

The Vice-Chancellor/Director
<Institutions Deemed_to_be_University as per list attached>

Subject: Use of the word 'University' by Institutions Deemed to be Universities- Directions issued by Hon'ble Supreme Court.

Sir/Madam,

The Hon'ble Supreme Court vide orders dated 03.11.2017 under para 51 and 53 (XII) observed and directed as under:-

Para 51 - "We must also put on record what we have observed during the course of the hearing and consideration of the present matters. It has come to our notice that many institutions which are conferred the status of Deemed to be Universities are using the word "University", which in our view is opposed to the spirit of Section 23 of the UGC Act. The UGC shall take appropriate steps to stop such practice."

Para 53(XII) – "The UGC is further directed to take appropriate steps and implement Section 23 of the UGC Act and restrain Deemed to be Universities from using the word 'University' within one month from today."

In this regard, Section 23 of the UGC, 1956 (Prohibition of the use of the word "University" in certain cases is reproduced as under:-

"No Institution, whether a corporate body or not, other than a University established or incorporated by or under a Central Act, a Provincial Act or a State Act shall be entitled to have the word "University" associated with its name in any manner whatsoever."

### ಸುಪ್ರೀಂ ತೀರ್ಪಿಗೆ ಯುಜಿಸಿಯ ಸುತ್ತೋಲೆ...

2016ರ ವಿಶ್ವವಿದ್ಯಾಲಯ ರೆಗುಲೇಶನ್ ಆ್ಯಕ್ಟ್ ಪ್ರಕಾರ ಡೀಮ್ಡ್ ವಿವಿ ಹೆಸರು ನೀಡುವಾಗಲೇ ಈ ಕುರಿತು ಸ್ಪಷ್ಟವಾದ ಮಾಹಿತಿ ನೀಡಲಾಗಿದೆ ಎಂದು ಸುಪ್ರೀಂ ತಿಳಿಸಿದೆ. ಇದರ ಜತೆಯಲ್ಲಿ ಹೆಸರಿನ ಬಳಿಕ ಆವರಣದೊಳಗೆ ಡೀಮ್ಡ್ ಟು ಬೀ ಯುನಿವರ್ಸಿಟಿ ಎಂದು ಇನ್ನು ಮುಂದೆ ನಮೂದು ಮಾಡಬೇಕು ಎಂದು ಸುಪ್ರೀಂ ತನ್ನ ತೀರ್ಪಿನ ಮೂಲಕ ಯುಜಿಸಿಗೆ ತಿಳಿಸಿದೆ. ಯುಜಿಸಿ ಕೂಡ ಈ ತೀರ್ಪಿನ ಆಧಾರದಲ್ಲಿ ದೇಶದ ಎಲ್ಲ ಡೀಮ್ಡ್ ವಿವಿಗಳಿಗೂ ಸುತ್ತೋಲೆ ಕಳುಹಿಸುವ ಮೂಲಕ ಎಚ್ಚರಿಕೆ ನೀಡಿದೆ.

ಈಗಾಗಲೇ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಆಧಾರದಲ್ಲಿ ಯುಜಿಸಿ ಕ್ರಮ ಕೈಗೊಳ್ಳುತ್ತದೆ. ಇಂತಹ ಪ್ರಕರಣಗಳು ಎಲ್ಲಾದರೂ ಕಂಡು ಬಂದರೆ ಅಂತಹ ಡೀಮ್ಡ್ ವಿವಿಗಳ ಮೇಲೆ ಕ್ರಮ ಜರುಗಿಸಲಾಗುತ್ತದೆ. ಇಂತಹ ಪ್ರಕರಣಗಳು ಕಂಡು ಬಂದರೆ ಯುಜಿಸಿಗೆ ನೇರವಾಗಿ ದೂರು ಸಲ್ಲಿಸಬಹುದು. ಅದರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಯುಜಿಸಿಯ ಕಾರ್ಯದರ್ಶಿ ಪಿ.ಕೆ.ಠಾಕೂರ್ ಹೇಳಿದ್ದಾರೆ.